

ಬಲೂನ್ ಹಾರಿಸುವ ಮೂಲಕ ಶಾಂತಿ ಸಂದೇಶ





ಉತ್ಪಾದಿಸುವ ಸೌರ ಉಷ್ಣ ವಿದ್ಯುತ್ ಸ್ಥಾವರವೊಂದನ್ನು ನಿರ್ಮಿಸುತ್ತಿದ್ದು, ಕೆಲಸ ಪ್ರಗತಿಯಲ್ಲಿದೆ. 100 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಯನ್ನು ಜರ್ಮನ್ ನೆರವಿನಿಂದ ಕೈಗೊಳ್ಳಲಾಗಿದೆ. ಇದು ಕಾರ್ಯಗತವಾದಲ್ಲಿ ಈ ಕೇಂದ್ರಕ್ಕೆ ಅಗತ್ಯ ಇರುವಷ್ಟು ವಿದ್ಯುತ್ ದಿನದ 24 ಗಂಟೆಯೂ ಸರಬರಾಜು ಆಗುತ್ತದೆ. ಜೊತೆಗೆ ಸುತ್ತಮುತ್ತಲ ಹಳ್ಳಿಗಳಿಗೂ ವಿದ್ಯುತ್ ನೀಡುವ ಉದ್ದೇಶ ಇದೆ. ಖಾಸಗಿಯವರಿಗೆ ವಹಿಸಿಕೊಡದೆ ಇಲ್ಲಿನ ಸ್ವಯಂ ಸೇವಕರೇ ಯೋಜನೆಯನ್ನು ಕೃತಿಗಿಳಿಸಲು ಶ್ರಮಿಸುತ್ತಿರುವುದು ವಿಶೇಷ.

ಇಲ್ಲಿನ ಪರಿಸರವೂ ಸಮ್ಮೋಹಕ. ಕೊರಕಲು, ವಿಶಿಷ್ಟ ಬಂಡೆಗಳು ಗಮನ ಸೆಳೆಯುತ್ತವೆ. ಒಂದಕ್ಕೊಂದು ಜೋಡಿಸಿಟ್ಟಂತೆ ಇರುವ ಪರ್ವತಗಳು, ಕುರುಚಲು ಸಸ್ಯ. ಮನಮೋಹಿನಿ ಕೇಂದ್ರದ ಬಳಿಯ ಚಿಕ್ಕ ದೇಗುಲದಿಂದ ಬಂಡೆಗಳನ್ನು ಸನಿಹದಿಂದ ವೀಕ್ಷಿಸಬಹುದು. ನಿತ್ಯ ಬೆಳಿಗ್ಗೆ ಸೂರ್ಯೋದಯದ ಸಮಯದಲ್ಲಿ ಪಾರಿವಾಳಗಳಿಗೆ ಧಾನ್ಯಗಳನ್ನು ಹಾಕುತ್ತಾರೆ. ಸಾವಿರಾರು ಪಾರಿವಾಳಗಳು ಅಲ್ಲಿ ಸೇರಿರುತ್ತವೆ. ಪ್ರಕೃತಿಯ ನೋಟದ ಜೊತೆಗೆ ಪಾರಿವಾಳಗಳೂ ಮನಸ್ಸಿಗೆ ಮುದ ನೀಡುತ್ತವೆ.

ಬ್ರಹ್ಮಕುಮಾರಿ ಆಧ್ಯಾತ್ಮಿಕ ಕೇಂದ್ರಕ್ಕೆ ಹೋದವರು ಹೊರ ವಲಯದಲ್ಲಿ ಇರುವ ಸುತ್ತಮುತ್ತಲ ಪ್ರವಾಸಿ ತಾಣಗಳಿಗೂ ಹೋಗಿ ಬರಬಹುದು. ಅದರ ವ್ಯವಸ್ಥೆಯನ್ನೂ ಕೇಂದ್ರದವರೇ ಮಾಡುತ್ತಾರೆ. ರಾಜಸ್ಥಾನದ ಅತ್ಯಂತ ಎತ್ತರದ ಪ್ರದೇಶ ಕುರುಚಲು ಕಾಡಿನಿಂದ ಕೂಡಿದ ಅಬು ಪರ್ವತ ಶ್ರೇಣಿಯ ಸೊಬಗನ್ನೂ ಸವಿಯಬಹುದು. ವೈವಿಧ್ಯಮಯ ಕಾಡು, ಬಂಡೆಗಳಿಂದ ಕೂಡಿದ ಗಿರಿಧಾಮ. ಇದರ ಮೂಲ ಹೆಸರು ಅರ್ಬುದಾಂಚಲ.

ಅಬು ಪರ್ವತಕ್ಕೆ ಹೋಗುವ ರಸ್ತೆ ಅಂಕು ಡೊಂಕಿನಿಂದ ಕೂಡಿದೆ. ಒಂದೆಡೆ ಆಳ ಕಣಿವೆ, ಇನ್ನೊಂದೆಡೆ ಕುರುಚಲು ಸಸ್ಯಗಳಿಂದ ಕೂಡಿದ ಬೆಟ್ಟಗಳು. ಇದನ್ನು ಸೀಳಿ ಸಾಗುವ ಹಾದಿ ಸುತ್ತ ಹಸಿರಿದೆ. ಕಣ್ತುಂಬಿಕೊಳ್ಳುತ್ತಾ ತಣ್ಣನೆ ಗಾಳಿಯಲ್ಲಿ ಸಾಗುತ್ತಿದ್ದರೆ, ಮಲೆನಾಡಿನ ಚಿತ್ರಣವೇ ತೆರೆದುಕೊಳ್ಳುತ್ತದೆ.

ಸದಾ ತಣ್ಣನೆ ಹವೆಯಿಂದ ಕೂಡಿದ ಈ ಪ್ರದೇಶ ರಾಜಸ್ಥಾನದ ಪ್ರಮುಖ ಪ್ರವಾಸಿತಾಣ. ಪ್ರಶಾಂತ ನೆಕ್ಕಿ ಸರೋವರದ ಜೊತೆಗೆ 1960ರಲ್ಲಿ ಘೋಷಿಸಲ್ಪಟ್ಟ 290 ಕಿ.ಮೀ. ವ್ಯಾಪ್ತಿಯ ವನ್ಯಧಾಮವೂ ಇಲ್ಲಿದೆ. ಜ್ಞಾನ ಸರೋವರದಲ್ಲಿ ವಿದೇಶೀಯರಿಗೆ ವಾಸಿಸಲೆಂದೇ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಶಾಂತಿವನದಲ್ಲಿ ಜರುಗುವ ಎಲ್ಲ ಚಟುವಟಿಕೆಗಳೂ ಇಲ್ಲಿ ನಡೆಯುತ್ತವೆ. ಮಾರ್ಗಮಧ್ಯೆ ಸಿಗುವ ಗ್ಲೋಬಲ್ ಆಸ್ಪತ್ರೆ ಬಡವರ ಪಾಲಿನ ಸಂಜೀವಿನಿ. ಅನೇಕ ಪ್ರಮುಖ ಕಾಯಿಲೆಗಳಿಗೆ ತಜ್ಞ ವೈದ್ಯರು ಚಿಕಿತ್ಸೆ ನೀಡುತ್ತಾರಲ್ಲದೆ ಶಸ್ತ್ರ ಚಿಕಿತ್ಸಾ ಸೌಲಭ್ಯವೂ ಇದೆ.

ಸಂಸ್ಥೆಯು ನಡೆಸುವ ಗೋಶಾಲೆಯಲ್ಲಿ ಅಪರೂಪದ ಅನೇಕ ತಳಿಗಳಿವೆ. ಸಾವಯವ ಕೃಷಿಗೂ ಮಹತ್ವ ನೀಡಿದ್ದು ಪ್ರತ್ಯೇಕ ಕೃಷಿ ತಾಕುಗಳಿವೆ. ಇನ್ನೊಂದೆಡೆ ಎಲ್ಲಾ ಬಗೆಯ ಸಸ್ಯಗಳಿಂದ ಕೂಡಿದ ಸಸ್ಯಕಾಶಿ ಹಸಿರುವನ ಇದ್ದು ನಿರ್ವಹಣೆ ಅತ್ಯುತ್ತಮ. ಅತ್ಯಂತ ಅಪರೂಪ ಹಾಗೂ ಸೂಕ್ಷ್ಮ ಅಮೃತ ಶಿಲೆಯ ಕೆತ್ತನೆಗಳಿಂದ ಕೂಡಿದ ದಿಲ್ವಾರಾದ ಜೈನ್ ದೇಗುಲ ಸಂಕೀರ್ಣವೂ ಅದ್ಭುತ. ರಾಜಸ್ಥಾನದ ಇನ್ನೊಂದು ಪ್ರಮುಖ ಧಾರ್ಮಿಕ ಕೇಂದ್ರ ದುರ್ಗಾ ಅಂಬಿಕಾದೇವಿ ಮಂದಿರ, ಆಧಾರದೇವಿ ರಘುನಾಥಜೀ ಮಂದಿರಗಳಿಗೂ ಇಲ್ಲಿಂದ ಹೋಗಿ ಬರಬಹುದು.

ಗಬ್ಬರ್ ಬೆಟ್ಟದ ತುದಿಯಲ್ಲಿ ಇರುವ ಅಂಬಾಜಿ ಮಾತಾ ಮಂದಿರಕ್ಕೆ ರೋಪ್‌ವೇ ಮೂಲಕವೂ ಹೋಗಿ ಬರಲು ವ್ಯವಸ್ಥೆ ಇದೆ. ರೋಪ್‌ವೇ ವ್ಯವಸ್ಥೆ ಪ್ರವಾಸಿಗರ ಪ್ರಮುಖ ಆಕರ್ಷಣೆ.

ಬೆಂಗಳೂರಿನಿಂದ ಅಬು ರಸ್ತೆಗೆ ನೇರ ರೈಲ್ವೆ ಸಂಪರ್ಕ ಇದೆ. ಅಹಮದಾಬಾದ್ ವರೆಗೆ ವಿಮಾನ, ಅಲ್ಲಿಂದ ಬಸ್/ರೈಲ್ವೆ ಮೂಲಕವೂ ತಲುಪಬಹುದು. ಬ್ರಹ್ಮಕುಮಾರಿ ಸಂಸ್ಥೆಯ ಮೂಲಕ ನಿರ್ದಿಷ್ಟ ಕಾರ್ಯಕ್ರಮಗಳಿಗೆ ಅಥವಾ ಪ್ರವಾಸದ ನೆಪದಲ್ಲೂ ಇಲ್ಲಿಗೆ ಹೋಗಿಬರಬಹುದು. ಅಬುವಿನಿಂದ ಉದಯಪುರದಲ್ಲಿರುವ ಹಳದಿಘಾಟ್‌ನ ರಾಣಾಪ್ರತಾಪ ಸಿಂಹ ಮ್ಯೂಸಿಯಂ, ಅಹಮದಾಬಾದ್‌ನಲ್ಲಿರುವ ಗಾಂಧೀಧಾಮ ಮತ್ತು ಅಕ್ಷರಧಾಮಗಳಿಗೂ ಭೇಟಿ ನೀಡಬಹುದು.